ಆ) ದಿನಾಂಕ 25-12-94ರಂದು ರಾತ್ರಿ, ಶ್ರೀಗಂಧ ಕಳ್ಳ ಸಾಗಾಣಿಕೆ ಆಗುತ್ತದೆ ಎಂಬ ಮಾಹಿತಿಯ ಆಧಾರದ ಮೇಲೆ, ಶಿವಮೊಗ್ಗ ವನ್ಯಜೀವಿ ವಿಭಾಗದ ಅರಣ್ಯ ಸಿಬ್ಬಂದಿಯವರು, ವೀರಣ್ಣನ ಬೆನವಳ್ಳಿಯ ಹತ್ತಿರ ಕಾಯುತ್ತಿದ್ದಾಗ, ಅಲ್ಲಿಗೆ ಬಂದ ಅಂಬಾಸಿಡರ್ ಕಾರನ್ನು ಸಿಬ್ಬಂದಿಯವರು, ನಿಲ್ಲಿಸಲು ಸೂಚಿಸಿದರೂ. ಅದರ ಚಾಲಕ ನಿಲ್ಲಿಸದೇ ಓಡಿಸಿಕೊಂಡು ಹೋಗಿದ್ದರಿಂದ, ಸಿಬ್ಬಂದಿಯವರು ಸದರಿ ವಾಹನವನ್ನು ಹಿಂಬಾಲಿಸಿ, ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿ, ಕಾರನ್ನು ತಡೆದು ತಪಾಸಣೆ ಮಾಡಲಾಯಿತು.. ಕಾರಿನಲ್ಲಿ ಯಾವುದೆ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯು ಪತ್ತೆಯಾಗಲಿಲ್ಲ. ಕಾರಿನ ಚಾಲಕನ ಅನುಮಾನಾಸ್ಪದ ನಡೆವಳಿಕೆಯೇ ಈ ಘಟನೆಗೆ ಕಾರಣವಾಯ್ತು.

ಇ) ಯಾರಿಗೂ ಯಾವ ವಿಧವಾದ ಹಾನಿಯು ಉಂಟಾಗಿರುವುದಿಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಹೊಸನಗರ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಕುರಿತು

788 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ವೈದ್ಯರು ಇಲ್ಲದೆ ಖಾಲಿ ಇರುವ ಆಸ್ಪತ್ರೆಗಳು ಎಷ್ಟು ಹಾಗೂ ಎಷ್ಟು ದಿನಗಳಿಂದ ಖಾಲಿ ಇವೆ?

ಇ) ಈ ಖಾಲಿ ಇರುವ ವೈದ್ಯರುಗಳ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 10

ಆ) ಪ್ರಾಥಮಿಕ ಆರೋಗ್ಯ ಕೇಂದ್ರ :

ಯದೂರು	-	ಜುಲೈ 1992 ರಿಂದ
ಕೂಡೂರು	-	ಜೂನ್ 1993 ರಿಂದ
ಸಂಪೇಕಟ್ಟೆ	-	1990 ರಿಂದ
ಸೋನಲ್	-	ಮೇ 1992 ರಿಂದ

ಇ) ದಿ: 10-2-95ರ ಅಧಿಸೂಚನೆಯಲ್ಲಿ ಈ ಹುದ್ದೆಗಳನ್ನು ಗುತ್ತಿಗೆ ಆಧಾರದ ವೈದ್ಯರುಗಳಿಂದ ತುಂಬಲಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿರುವ ಕ್ರೀಡಾ ತರಬೇತಿದಾರರ ಬಗ್ಗೆ

792 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಜನ ಕ್ರೀಡಾ ತರಬೇತುದಾರರಿದ್ದಾರೆ?

ಆ) ತಾಲ್ಲೂಕಿಗೊಬ್ಬರಂತೆ ಕ್ರೀಡಾ ತರಬೇತುದಾರರನ್ನು ನಿಯುಕ್ತಿಗೊಳಿಸುವ ಆಲೋಚನೆ ಸರ್ಕಾರಕ್ಕಿದೆಯೇ? ಇದ್ದರೆ ಯಾವಾಗಿನಿಂದ ನಿಯುಕ್ತಿಗೊಳ್ಳಲಾಗುವುದು?

ಇ) ಗ್ರಾಮಾಂತರದಲ್ಲಿರುವ ಯುವ ಕ್ರೀಡಾ ಘಟಕಗಳನ್ನು ಗುರುತಿಸಿ ಅವರ ಪ್ರತಿಭೆಯನ್ನು ಹೊರ ತೆಗೆಯಲು ಸರ್ಕಾರದ ಯೋಜನೆ ಏನು?

ಶ್ರೀ ಅಜಯಕುಮಾರ್ ಸರ್ ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) 4 ತರಬೇತುದಾರರು

ಆ) ಹೌದು, ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸರ್ಕಾರವು, ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಗುರುತಿಸುವ ಸಲುವಾಗಿಯೇ ಈ ಕೆಳಗಿನ ಯೋಜನೆಗಳ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಕಾರ್ಯರೂಪಕ್ಕೆ ತಂದಿದೆ.

1. ಬೇಸಿಗೆ ತರಬೇತಿ ಶಿಬಿರ:

ಬೇಸಿಗೆ ರಜಾ,ಕಾಲಾವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹುದುಗಿರುವ ಕ್ರೀಡಾ ಪ್ರತಿಭೆಗಾಗಿಯೇ ವಿವಿಧ ಕ್ರೀಡೇಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ಈ ತರಬೇತಿ ಶಿಬಿರದಲ್ಲಿ ಗುರುತಿಸಲ್ಪಟ್ಟ ಕ್ರೀಡಾ ಪ್ರತಿಭೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಗ್ರಾಮಾಂತರ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಲಾಗುತ್ತಿದೆ. ಮತ್ತು ಕ್ರೀಡಾ ಶಾಲೆ, ಕ್ರೀಡಾ ನಿಲಯಗಳಲ್ಲಿ ಅಯ್ಕೆಯಲ್ಲಿ ಭಾಗವಹಿಸಲು ಸೂಚಿಸಲಾಗುತ್ತಿದೆ.

2. ಗ್ರಾಮೀಣ ಕ್ರೀಡಾ ಕೂಟ :

ಗ್ರಾಮೀಣ ಪ್ರದೇಶದ ಕ್ರೀಡೇ ಪಟುಗಳಗಾಗಿಯೇ ತಾಲ್ಲೂಕು ಮಟ್ಟದಿಂದ ರಾಷ್ಟ್ರ ಮಟ್ಟದವರೆಗೂ ಗ್ರಾಮೀಣ ಕ್ರೀಡಾ ಕೂಟವನ್ನು ನಡೆಸಲಾಗುತ್ತಿದೆ. ಆಯ್ಕೆಯಾದ ಪ್ರತಿಭೆಗಳಿಗೆ, ರಾಜ್ಯ ರಾಷ್ಟ್ರ ಮತ್ತು ಅಂತರ ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು ವಿಶೇಷ ತರಬೇತಿಯನ್ನು ನಿಡಲಾಗುತ್ತಿದೆ ಮತ್ತು ಸಾಧನೆ ಮಾಡಿದ ಕ್ರೀಡಾ ಪ್ರತಿಭೆಗಳಿಗೆ ಮುಂದುವರೆದ ತರಬೇತಿಯನ್ನು ನೀಡಿ ವಿವಿಧ ಉತ್ತಮ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡಲಾಗುತ್ತಿದೆ.

3. ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಕ್ರೀಡಾ ಶಾಲೇ ಕ್ರೀಡಾ ನಿಲಯಗಳಿಗಾಗಿ ಆಯ್ಕೆ :

ಪ್ರತಿಭಾನ್ವಿತ ಕ್ರೀಡಾಪಟುಗಳಿಗಾಗಿ ಕ್ರೀಡಾ ಶಾಲೇ ಕ್ರೀಡಾ ನಿಲಯಗಳನ್ನು ನಡೆಸಲಾಗುತ್ತಿದೆ. ಉತ್ತಮ ಪ್ರತಿಭೆ ಉಳ್ಳಂತ ಪ್ರತಿಭೆಗಳಿಗೆ ಪರೀಶೀಲನಾ ತರಬೇತಿ ಶಿಬಿರ ನಡೆಸಿ ಸೂಕ್ತ ಪ್ರತಿಭೆಗಳನ್ನು ವಿವಿಧ ಕ್ರೀಡಾ ಶಾಲೆ ಹಾಗೂ ಕ್ರೀಡಾ ನಿಲಯಗಳಿಗೆ ಪ್ರವೇಶ ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಆಯ್ಕೆಯಾದ ಕ್ರೀಡಾ ಪಟುಗಳಿಗೆ ಕ್ರೀಡಾ ಶಾಲೆ, ಕ್ರೀಡಾ ನಿಲಯದಲ್ಲಿ ತರಬೇತಿ ನೀಡಲಾಗುತ್ತಿದೆ.

ಜಯಮಹಲ್ ವಿಧಾನಸಭಾ ಕ್ಷೇತ್ರದಲ್ಲಿರತಕ್ಕ ಕ್ರೀಡಾಂಗಣಗಳ ಬಗ್ಗೆ

866 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಯಮಹಲ್ ವಿಧಾನ ಸಭಾ ಕ್ಷೇತ್ರದಲ್ಲಿರತಕ್ಕ ಕ್ರೀಡಾಂಗಣಗಳು ಎಷ್ಟು?

ಆ) ಈ ಕ್ಷೇತ್ರದಲ್ಲಿ ಹೊಸದಾಗಿ ಕ್ರೀಡಾಂಗಣ ನಿರ್ಮಿಸಲು ಕ್ರಮಕೈಗೊಳ್ಳಲಾಗಿದೆಯೇ?

ಇ) 1994-95 ರಲ್ಲಿ ಎಷ್ಟು ಕ್ರೀಡಾಂಗಣಗಳನ್ನು ಅಭಿವೃದ್ಧಿಗೊಳಿಸಲಾಯಿತು?